ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು. ದಿನಾಂಕಃ 19.11.2024.

**ಪಾಟೀ ಸವಾಲುಃ** ವಾದಿ ಪರ ಶ್ರೀ ಎ.ಡಬ್ಲ್ಯೂ .ಎ. ವಕೀಲರಿಂದಃ

ವಾದಿಯರು ನನ್ನ ಅಕ್ಕಂದಿರು ಎಂದರೆ ಸರಿ. 2ನೇ ಪ್ರತಿವಾದಿ ನನ್ನ ತಮ್ಮ ಎಂದರೆ ಸರಿ. ನನ್ನ ತಂದೆ ಖುಷಿದ ಅಲಿ ತಿರಿಕೊಂಡು ಸುಮಾರು 30-35 ವರ್ಷವಾಗಿರುತ್ತದೆ. ನನ್ನ ತಾಯಿ ನನ್ನ ತಂದೆ ತಿರಿಕೊಳ್ಳುವ ಮುಂಚೆ 6 ತಿಂಗಳ ಮುಂಚೆ ತಿರಿಕೊಂಡಿರುತ್ತಾರೆ. ನನ್ನ ಹಾಗೂ ನನ್ನ ಸಹೋದರಿಯರ ಮದುವೆಯನ್ನು ನನ್ನ ತಂದೆ ಮಾಡಿರುತ್ತಾರೆ ಎಂದರೆ ಸರಿ. ದಾವಾ ಸ್ವತ್ತುಗಳು ಮೂಲತಃ ತಂದೆಯವರಿಗೆ ಸೇರಿದ್ದವು ಎಂದರೆ ಸರಿ. ನನ್ನ ತಂದೆ ತನ್ನ ಜೀವಂತ ಕಾಲಕ್ಕೆ ಸರ್ವೆ ನಂ.80 ರಲ್ಲಿ 2 ಎಕರೆ ಜಮೀನನ್ನು ಬೇರೆಯವರಿಗೆ ವರ್ಗಾವಣೆ ಮಾಡಿದ್ದರು. ಸದರಿ 2 ಎಕರೆ ಜಮೀನನ್ನು ಎಷ್ಟು

ಹಣಕ್ಕೆ ಒತ್ತಿಇಟ್ಟಿದ್ದರು ಎಂದು ನನಗೆ ಗೊತ್ತಿಲ್ಲ. ನನ್ನ ತಂದೆ ತನಗೆ ಕುಟುಂಬದ ನಿರ್ವಹಣೆ ಸಲುವಾಗಿ ಹಣದ ಅಡೆಚಣೆ ಇದ್ದ ಕಾರಣ ಅದನ್ನು ಒತ್ತಿಇಟ್ಟಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ಮಾರಾಟ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ 2 ಎಕರೆ ಖರೀದಿಸಿದ ಖರೀದಿದಾರರ ಹೆಸರು ದತ್ತಾತ್ರಯ ಪಾಟೀಲ್ ಇರುತ್ತದೆ. ಸದರಿ 2 ಎಕರೆ ಜಮೀನನ್ನು ಮೇಲೆ ಹೇಳಿದ ದತ್ತಾತ್ರಯ ಪಾಟೀಲ್ ರವರಿಂದ 2ನೇ ವಾದಿ ಗಂಡ ಅಬ್ದುಲ್ ರೌಫ್ ರವರು ಬಿಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಖರೀದಿ ತೆಗೆದುಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ 2 ಎಕರೆ ಜಮೀನಿದಲ್ಲಿ ಅಬ್ದುಲ್ ರೌಫ್ ಕಬ್ಜೆ ಇಲ್ಲ ಎಂದರೆ ಸರಿ. ಸಾಕ್ಷಿ ನಾನು ಕಬ್ಜೆ ಇರುತ್ತೇನೆ ಎಂದು ನುಡಿಯುತ್ತಾರೆ. ಕಾರಣ ಸದರಿ ಅಬ್ದುಲ್ ರೌಫ್ ಮಾಲಿಕರು ಅಲ್ಲ ಎಂದರೆ ಸರಿ. ನಾನು ಮಾಲಿಕ ಇರುತ್ತೇನೆ ಎಂದು ನುಡಿಯತ್ತಾರೆ.

ನಾನು ಅಬ್ದುಲ್ ರೌಫ್‌ನಿಂದ ಮೇಲೆ ಹೇಳಿದ ಜಮೀನನ್ನು ಖರೀದಿ ಮಾಡಿರುವುದಿಲ್ಲ, ಆದರೆ ನನಗೆ ಡಿಕ್ರಿ ಮಾಡಿಕೊಟ್ಟಿರುತ್ತಾರೆ. ನನಗೆ ಡಿಕ್ರಿ ಮಾಡಿಕೊಟ್ಟಿದ್ದಕ್ಕೆ ನಾನು ಯಾವುದೇ ಹಣ ಕೊಟ್ಟಿರುವುದಿಲ್ಲ, ಆದರೆ ಅವರು ನನಗ ಗಿಫ್ಟ್ ಡಿಡ್ ಮಾಡಿಕೊಟ್ಟಿರುತ್ತಾರೆ. ದಿಃ 16.09.2009ರಂದು ನನಗೆ ಗಿಫ್ಟ್ ಡಿಡ್ ಮಾಡಿಕೊಟ್ಟಿರುತ್ತಾರೆ. ಸದರಿ ಗಿಫ್ಟ್ ಡಿಡ್ ನೋಂದಣಿಯಾಗಿರುವುದಿಲ್ಲ. ಸದರಿ ಗಿಫ್ಟ್ ಡಿಡ್ ಕಾಶಿನಾಥ ರವರ ಸಮಕ್ಷಮ ಆಗಿರುತ್ತದೆ. ಸದರಿ ಗಿಫ್ಟ್ ಡಿಡ್ ಪ್ರಕಾರ ನನಗೆ 2 ಎಕರೆ ಜಮೀನು ಮತ್ತು ನನ್ನ ತಮ್ಮನಿಗೆ 2 ಎಕರೆ ಜಮೀನು ಬಂದಿರುತ್ತದೆ. ನನಗೆ ಡಿಕ್ರಿ ಮಾಡಿಕೊಟ್ಟ ಕೇಸ್ ನಂ.207/2009 ಆಗಿರುತ್ತದೆ. ಸದರಿ ತಲಾ 2-2 ಎಕರೆ ಜಮೀನನ್ನು ನಮಗೆ ಸರ್ವೆ ನಂ.80 ರಲ್ಲಿ ಮಾಡಿಕೊಟ್ಟಿರುತ್ತಾರೆ. ಸದರಿ ಗಿಫ್ಟ್ ಡಿಡ್ ನನ್ನ ಹತ್ತಿರ ಇರುವುದಿಲ್ಲ, ನ್ಯಾಯಾಲಯಕ್ಕೆ ಕೊಟ್ಟಿರುತ್ತೇನೆ. ನಾನು ಗಿಫ್ಟ್ ಡಿಡ್ ನ್ಯಾಯಾಲಯಕ್ಕೆ ಕೊಟ್ಟಿಲ್ಲ ಎಂದರೆ ಸರಿಯಲ್ಲ.

ನಮಗೆ ತಲಾ 2-2 ಎಕರೆ ಗಿಫ್ಟ್ ಡಿಡ್ ಮಾಡಿಕೊಟ್ಟಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಯಾವುದೇ ತರಹದ ಗಿಫ್ಟ್ ಡಿಡ್ ನಮಗೆ ಮಾಡಿಕೊಟ್ಟಿಲ್ಲ ಎಂದರೆ ಸರಿಯಲ್ಲ. ಮೇಲೆ ಹೇಳಿದ ತಲಾ 2-2 ಎಕರೆ ಜಮೀನು ಪೂರ್ವಕ್ಕೆ ನನ್ನ ಜಮೀನು, ಪಶ್ಚಿಮಕ್ಕೆ ನನ್ನ ತಮ್ಮನ ಜಮೀನು ಇರುತ್ತದೆ. ನನಗೆ ಬಂದ 2 ಎಕರೆ ಜಮೀನಿನ ಚೆಕ್‌ಬಂದಿ ಪೂರ್ವಕ್ಕೆ ಸೈಯದ್ ಖಾಜಂ ಅಲಿ ರವರ ಜಮೀನು, ಪಶ್ಚಿಮಕ್ಕೆ ರಾಮಚಂದ್ರ ಪೂತದಾರ ಜಮೀನು, ಉತ್ತರಕ್ಕೆ ನನ್ನ ಸ್ವಂತ ಜಮೀನು ಇರುತ್ತದೆ, ದಕ್ಷಿಣಕ್ಕೆ ಕೂಡಾ ನನ್ನ ಮತ್ತು ನನ್ನ ತಮ್ಮನ ಹೆಸರಿನಲ್ಲಿರುವ ಸ್ವಂತ ಜಮೀನುಗಳು ಇರುತ್ತವೆ. ನನ್ನ ತಮ್ಮನಿಗೆ ಕೊಟ್ಟ ಜಮೀನಿನ ಚೆಕ್‌ಬಂದಿ ಕೂಡಾ ಮೇಲೆ ಹೇಳಿದಂತೆ ಒಂದೇ ಇರುತ್ತದೆ.

ಸರ್ವೆ ನಂ.81/3ರ 2 ಎಕರೆ 37 ಗುಂಟೆ ಜಮೀನಿಗೆ ಸಂಬಂಧಪಟ್ಟಂತೆ ವಾದಿಯರು ನನಗೆ ಯಾವುದೇ ದಾಖಲೆ ಬರೆದುಕೊಟ್ಟಿರುವುದಿಲ್ಲ. ಸರ್ವೆ ನಂ.81/3ರಲ್ಲಿ ವಾದಿಯರು ನನಗೆ ಬಿಟ್ಟುಕೊಟ್ಟಿರುತ್ತಾರೆ ಎಂದು ಹೇಳಿರುವ ಸಂಗತಿ ಸುಳ್ಳು ಇದೆ ಎಂದರೆ ಸರಿಯಲ್ಲ. ನಾನು ವಾದಿಯರನ್ನು ಕುರಿತು ಯಾವುದೇ ದಾಖಲೆ ಬರೆದುಕೊಡಲು ಕೇಳಿರುವುದಿಲ್ಲ. ಸರ್ವೆ ನಂ.81ರಲ್ಲಿ ವಾದಿಯರದು ಕೂಡಾ ಹಕ್ಕು ಇದೆ ಎಂದರೆ, ಸಾಕ್ಷಿ ಹಿರಿಯರ ಸಮಕ್ಷಮ ವಾದಿಯರು ತಲಾ ರೂ.50,000/- ಹಣ ಪಡೆದು ನಮಗೆ ಬಿಟ್ಟುಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಹಣ ಕೊಟ್ಟ ಬಗ್ಗೆ ಯಾವುದೇ ರಶೀದಿಯನ್ನು ವಾದಿಯರಿಂದ ಪಡೆದಿಲ್ಲ. ಸದರಿ ಹಣ ಕೊಟ್ಟಿದ್ದರ ಬಗ್ಗೆ ಪ್ರತಿವಾದ ಪತ್ರದಲ್ಲಿ ಆಗಲಿ ಅಥವಾ ಮುಖ್ಯ ವಿಚಾರಣೆಯಲ್ಲಿ ಆಗಲಿ ಹೇಳಿಲ್ಲ ಎಂದರೆ ಸರಿ.

ನಾನು ಮತ್ತು 2ನೇ ಪ್ರತಿವಾದಿ 20 ವರ್ಷದ ಹಿಂದೆ ಸರ್ವೆ ನಂ.81ರಲ್ಲಿ 2 ಎಕರೆ 37 ಗುಂಟೆ ಜಮೀನನ್ನು ನಾವಿಬ್ಬರು ಹಂಚಿಕೊಂಡಿರುತ್ತೇವೆ. ಆ ರೀತಿ ಹಂಚಿಕೊಂಡು ಸುಮಾರು 22-23 ವರ್ಷವಾಗಿರುತ್ತದೆ. ಆ ಬಗ್ಗೆ ಯಾವುದೇ ಹಂಚಿಕೆ ಪತ್ರದ ದಾಖಲೆಯಾಗಿಲ್ಲ, ಏಕೆಂದರೆ ಅದು ನಮ್ಮ

ತಂದೆಯ ಆಸ್ತಿ ಆ ಕಾರಣ ನಮ್ಮ ಹೆಸರುಗಳನ್ನು ದಾಖಲಿಸಿಕೊಂಡಿರುತ್ತೇವೆ. ಸದರಿ ಹಂಚಿಕೆ ಕಾಲಕ್ಕೆ ವಾದಿಯರಿಗೆ ಹಣ ಕೊಟ್ಟಿರುತ್ತೇವೆ, ನಂತರ ನಾವು ವಾಟ್ನಿ ಮಾಡಿಕೊಂಡಿರುತ್ತೇವೆ. ನನ್ನ ಪ್ರಕಾರ ಯಾವುದೇ ಹಂಚಿಕೆ ಪತ್ರದ ದಾಖಲೆ ಇರುವುದಿಲ್ಲ, ಆದರೆ ಸಮ್ಮತಿ ಮೂಲಕ ತಲಾಟೆಗೆ ಹೇಳಿ 2 ಎಕರೆ 37 ಗುಂಟೆ ಪೈಕಿ ತಲಾ ಅರ್ಧ ತೆಗೆದುಕೊಂಡಿರುತ್ತೇವೆ ಹಾಗೂ ನಮ್ಮ ಹೆಸರಿನಲ್ಲಿ ದಾಖಲಿಸಿರುತ್ತೇವೆ.

ಸರ್ವೆ ನಂ.80 ನನ್ನ ತಂದೆಯ ಹೆಸರಿನಲ್ಲಿ ಒಟ್ಟು 9 ಎಕರೆ 23 ಗುಂಟೆ ಇತ್ತು. ಸದರಿ ಜಮೀನು ಸದ್ಯ ನನ್ನ ಹೆಸರಿನಲ್ಲಿ ಹಾಗೂ ನನ್ನ ತಮ್ಮ ಹೆಸರಿನಲ್ಲಿ ತಲಾ 4 ಎಕರೆ 23 ಗುಂಟೆ ಜಮೀನು ಇರುತ್ತದೆ, ಅದನ್ನು ನನ್ನ ತಂದೆ ಇರುವ ಕಾಲಕ್ಕೆನೆ ಮಾಡಿಕೊಟ್ಟಿರುತ್ತಾರೆ. ಆ ರೀತಿ ಮಾಡಿಕೊಟ್ಟು ಸುಮಾರು 30-35 ವರ್ಷವಾಗಿರುತ್ತದೆ. ನಮ್ಮ ಹೆಸರಿನಲ್ಲಿ ಮಾಡಿಕೊಳ್ಳಲಿಕ್ಕೆ ನಾವು ಅರ್ಜಿ ಕೊಟ್ಟಿದ್ದೇವು, ಅರ್ಜಿ ಕೊಟ್ಟ ತಾರಿಕು ನನಗೆ ಗೊತ್ತಿಲ್ಲ. ಸದರಿ ಅರ್ಜಿಯನ್ನು ನಮ್ಮ ತಂದೆ ಇರುವ ಕಾಲಕ್ಕೆನೇ ಕೊಡಲಾಗಿತ್ತು ಅವರೇ ನಮ್ಮಗಳ ಹೆಸರಿನಲ್ಲಿ ಮಾಡಿಕೊಟ್ಟಿರುತ್ತಾರೆ. ನಮ್ಮಗಳ ಹೆಸರಿನಲ್ಲಿ ಆದ ಮ್ಯೂಟೇಷನ್‌ಗಳು ಯಾವ ಆಧಾರದ ಮೇಲೆ ಮಾಡಿಕೊಂಡಿರೀ ಎಂದರೆ, ಸಾಕ್ಷಿ ನಮ್ಮ ತಂದೆ ಮಾಡಿಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ನಮ್ಮ ತಂದೆ ತಲಾಟೆಯವರಲ್ಲಿ ಸ್ಟಾಂಪ್ ಬರೆದುಕೊಟ್ಟು ನಮ್ಮಗಳ ಹೆಸರಿನಲ್ಲಿ ಮಾಡಿಕೊಟ್ಟಿರುತ್ತಾರೆ . ಸದರಿ ಸ್ಟಾಂಪ್ ದಿನಾಂಕ ಮತ್ತು ಅದರ ಮೌಲ್ಯ ಎಷ್ಟು ಇತ್ತು ಎಂದು ನನಗೆ ಗೊತ್ತಿಲ್ಲ. ಸದರಿ ಸ್ಟಾಂಪ್‌ನ್ನು ಬರೆಯುವ ಕಾಲಕ್ಕೆ ಅಬ್ದುಲ್ ಹಮೀದ್ ವಳಸಂಗ ರವರ ಸಮಕ್ಷಮ ಬರೆದುಕೊಟ್ಟಿರುತ್ತಾರೆ. ಸದರಿ ಕಾಗದವನ್ನು ವಳಸಂಗ ರವರು ಬರೆದಿರುತ್ತಾರೆ. ಸದರಿ ಕಾಗದವನ್ನು ಯಾವ ಭಾಷೆಯಲ್ಲಿ ಬರೆದಿರುತ್ತಾರೆ ಎಂದು ಗೊತ್ತಿಲ್ಲ, ಆದರೆ ಹಿಂದಿ ಭಾಷೆಯಲ್ಲಿ ಇರಬಹುದು.

ಮ್ಯೂಟೇಷನ್ ಆದ ನಂತರ ನನ್ನ ತಂದೆ ಬರೆದುಕೊಟ್ಟ ಛಾಪಾಕಾಗದವನ್ನು ನಾವು

ತಲಾಟಿಯಿಂದ ಮರಳಿ ಪಡೆದಿಲ್ಲ. ಸದರಿ ಕಾಗದ ಎಲ್ಲಿ ಇದೆ, ಯಾರು ಬಳಿ ಇದೆ ಎಂದು ನಮಗೆ ಗೊತ್ತಿಲ್ಲ, ತಹಶಿಲ್ದಾರ ಬಳಿ ಇರಬಹುದು. ತಹಶಿಲ್ದಾರ ಕಛೇರಿಯಿಂದ ತಂದು ಹಾಜರುಪಡಿಸಿಲ್ಲ ಸಾಧ್ಯವಿಲ್ಲ, ಏಕೆಂದರೆ ಅದು ಇದೆವೋ ಇಲ್ಲವೋ ಗೊತ್ತಿಲ್ಲ. ಸದರಿ ಕಾಗದದ ಮೂಲಕ ನನ್ನ ತಂದೆ ನಮ್ಮಿಬ್ಬರಿಗೂ ತಲಾ 4 ಎಕರೆ 23 ಗುಂಟೆ ಜಮೀನು ಕೊಟ್ಟಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅದೇ ರೀತಿ ನಮಗೆ ಕಬ್ಜಾ ಕೊಟ್ಟು ಗೀಫ್ಟ್ ಮಾಡಿರುತ್ತಾರೆ ಎಂದು ಹೇಳಿದ ಸಂಗತಿ ಸುಳ್ಳು ಇದೆ ಎಂದರೆ ಸರಿಯಲ್ಲ. ನಮ್ಮ ತಂದೆ ತಿರಿಕೊಂಡ ನಂತರ ನಾನು, ನನ್ನ ತಮ್ಮ ಹಾಗೂ ವಾದಿಯರು ವಾರಸುದಾರರು ಇರುತ್ತೇವೆ ಎಂದರೆ ಸರಿ.

ದಾವಾ ಸ್ವತ್ತುಗಳಲ್ಲಿ ವಾದಿಯರಿಗೂ ಕೂಡಾ ಪಾಲು ಇದೆ ಹಾಗೂ ನಮ್ಮಗಳ ಮತ್ತು ವಾದಿಯರು ಜಂಟಿ ಕಬ್ಜೆಯಲ್ಲಿ ದಾವಾ ಸ್ವತ್ತುಗಳು ಇವೆ ಎಂದರೆ ಸರಿಯಲ್ಲ. ವಾದಿಯರಿಗೆ ದಾವಾ ಸ್ವತ್ತುಗಳಲ್ಲಿ ಪಾಲು ಕೊಡಬಾರದು ಎಂಬ ಉದ್ದೇಶದಿಂದ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ತಂದೆ ನಮಗೆ ಯಾವತ್ತೂ ಗೀಫ್ಟ್ ಮಾಡಿಕೊಟ್ಟಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ಸರ್ವೆ ನಂ.81ರ ಜಮೀನನ್ನು ಬಿಟ್ಟುಕೊಟ್ಟಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ಸದರಿ 81ರ ಜಮೀನನ್ನು ನಾನು ಮತ್ತು 2ನೇ ಪ್ರತಿವಾದಿ ಹಂಚಿಕೊಂಡಿರುತ್ತೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅದೇ ರೀತಿ ಸರ್ವೆ ನಂ.80ಕ್ಕೆ ಸಂಬಂಧಪಟ್ಟಂತೆ ಅಬ್ದುಲ್ ರೌಫ್ ರವರು ನನಗೆ ಗೀಫ್ಟ್ ಡಿಡ್ ಮಾಡಿಕೊಟ್ಟಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅದೇ ರೀತಿ ವಾದಿಯರಿಗೆ ಗೊತ್ತಿರದೇ ಒಂದು ಡಿಕ್ರಿ ಪಡೆದುಕೊಂಡಿರುತ್ತೇವೆ ಎಂದರೆ ಸರಿಯಲ್ಲ.

ದಾವಾ ಸ್ವತ್ತುಗಳಲ್ಲಿ ನನಗೆ ಮತ್ತು 2ನೇ ಪ್ರತಿವಾದಿಗೆ ಮಾತ್ರ ಹಕ್ಕು ಇದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅದೇ ರೀತಿ ನಾವು ಪಡೆದುಕೊಂಡ ಒ.ಎಸ್.ನಂ.207/2009ರ ಡಿಕ್ರಿ ವಾದಿಯರ ಮೇಲೆ ಬಂಧನಕಾರಿಯಾಗುವುದಿಲ್ಲ ಎಂದರೆ ಸರಿಯಲ್ಲ. ಸುಳ್ಳು ಪ್ರಮಾಣ ಪತ್ರ

ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಆಳಂದ.**